| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ | |
|---|---|
| | ಸಿ.ಸಿ.ನಂ. – 1/2021 |
| | ಚಾ.ಸಾ – 4 |
| | ಪ್ರಾ.ಸಾ – 3 |
| ಸಾಕ್ಷಿದಾರರ ಹೆಸರು | ಶ್ರೀಶೈಲ ಗಾಣಗಿ |
| ತಂದೆಯ ಹೆಸರು | ಶಿವಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ಅಧೀಕ್ಷರು, ಕ್ಷೇತ್ರ ಶಿಕ್ಷಣ ಕಾರ್ಯಾಲಯ ಜಮಖಂಡಿ |
| ವಾಸಸ್ಥಳ | ಜಮಖಂಡಿ |

ಇಂದು ದಿನಾಂಕ 03-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆ: ಸ.ಸ.ಅ ರವರಿಂದ</u>**

1. ದಿ:12.12.2012 ರಿಂದ ಇಲ್ಲಿಯವರೆಗೆ ನಾನು ಅಧೀಕ್ಷಕರು, ಕ್ಷೇತ್ರ ಶಿಕ್ಷಣ ಕಾರ್ಯಲಯ ಜಮಖಂಡಿ ಅಂತಾ ಕೆಲಸ ಮಾಡುತ್ತಿದ್ದೇನೆ. ಆರೋಪಿ ನಮ್ಮ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿಯವರು ವೇತನ ಬಡವಡೆ ಮತ್ತು ನ್ಯಾಯಾಲಯದ ಪ್ರಕರಣಗಳ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿ:28.02.2017 ರಂದು ಚಾಸಾ-1 ರವರು ನನಗೆ ಮತ್ತು ಬಸಯ್ಯ ಮಠ ಇವರಿಗೆ ಆರೋಪಿ ಮಾಡಿದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲನೆ ಮಾಡಲು ಸೂಚಿಸಿದ್ದಾರೆ. ಆರೋಪಿ ದಿ:27.12.2017 ರಂದು 15 ಜನ ಶಿಕ್ಷಕರ ಗಳಕೆ ರಜೆಯ ನಗದೀಕರಣ ಬಿಲ್ಲುಗಳನ್ನು ತಯಾರಿಸಿ ಚಾಸಾ-1 ರವರ ಸಹಿ ಪಡೆದು ಖಜಾನೆಗೆ ಸಲ್ಲಿಸಿದ್ದು, ದಿ:28.12.2017 ರಂದು ಖಜಾನೆಯಿಂದ ಬಂದ ಚೆಕಗಳಿಗೆ ವೇತನ ವಿತರಣಾ ಪಟ್ಟಿಯನ್ನು ತಯಾರಿಸುವಾಗ 11 ಜನ ಶಿಕ್ಷಕರ ಖಾತೆಗೆ ಮತ್ತು ತನ್ನ ವೈಯಕ್ತಿಕ ಖಾತೆಗೆ ಜಮಾ ಮಾಡಿದ್ದು, ಜಮೆ ಮಾಡಿದ ಶಿಕ್ಷಕರಿಂದ ನಿಮ್ಮ ಖಾತೆಗೆ ನನ್ನ ಹಣ ಜಮೆ ಆಗಿದ್ದು ಅದನ್ನು ಮರಳಿ ಕೊಡಿ ಎಂದು ಕೇಳಿದಾಗ ಶಿಕ್ಷಕರು ಸದರಿ ಹಣವನ್ನು ಆರೋಪಿಗೆ ಕೊಟ್ಟಿದ್ದಾರೆ. ಈ ಕುರಿತು ಆರೋಪಿಯನ್ನು ವಿಚಾರಿಸಿದಾಗ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ತಮ್ಮ ಖಾತೆಯಿಂದ ಅರ್ಹ ಶಿಕ್ಷಕರ ಖಾತೆಗೆ ಹಣವನ್ನು ಮರಳಿ ಜಮಾ ಮಾಡಿದ್ದಾರೆ.

ಈ ವೇಳೆಗೆ ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಪ್ರಭಾರ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ ಜಮಖಂಡಿ.